ಎಂ.ವಿ.ಸಿ **ನಂ** ಃ992/2017 **P.W.1**

ದಿನಾಂಕಃ21-03-2024 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಶ್ರೀ. ಜಿ. ಕೆ. ಪಿ. ವಕೀಲರಿಂದ.

1. ನಾನು ಮತ್ತು ಅರ್ಜಿದಾರ 4, 5 ಮತ್ತು 7 ರವರು ಮೃತ ರಾಜೇಶ್ರಿ ಮತ್ತು ನೋಟಾಪುರ ರವರ ಮಕ್ಕಳು. 2ನೇ ಅರ್ಜಿದಾರರು ಶಿಕಾರಿಪುರಕ್ಕೆ ಮದುವೆ ಆಗಿರುತ್ತಾರೆ. ಗಂಡ ಮೃತ ಪಟ್ಟಿರುತ್ತಾರೆ. ನಾವು ಅರ್ಜಿದಾರರುಗಳು ನಮ್ಮ ತಂದೆಯ ಆದಾಯದಿಂದ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ನಾವುಗಳು ಇಲ್ಲರೂ ಆಧಾರ್ ಕಾರ್ಡ್ ಮಾಡಿಸಿರುತ್ತೇವೆ. ನಮ್ಮ ತಂದೆಯ ಆಧಾರ್ ಕಾರ್ಡ್ ಅಪಘಾತ ಆದಾಗ ಕಳೆದು ಹೋಗಿದೆ. ನನಗೆ ಈಗ ಸುಮಾರು 55 ವರ್ಷದ ಒಳಗೆ ಇರಬಹುದು. ನಮ್ಮ ತಂದೆ ಮೃತ ಪಟ್ಟ ದಿನಾಂಕ ಗೊತ್ತಿಲ್ಲ. 11 ವರ್ಷ ಆಗಿವೆ. ಆಗ ನನಗೆ 44 ವರ್ಷ ಎನ್ನುವುದು ಸರಿ. ನನ್ನ ತಂದೆ ನನಗಿಂತ 30 ವರ್ಷ ದೊಡ್ಡವರಿರಬಹುದು. ಅಪಘಾತ ಆದ ಸಮಯದಲ್ಲಿ ಅವರಿಗೆ 70 ವರ್ಷ ಆಗಿತ್ತು ಎಂದರೆ 65 ವರ್ಷ ಆಗಿತ್ತು. ನಾನು ನನ್ನ ತಂದೆಯ ವಯಸ್ಸಿನ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಅಪಘಾತವು ಕ್ರೇನ್ ತಪ್ಪಿನಿಂದ ಆಗಿರುತ್ತದೆ. ನಾನು ಮತ್ತು ನನ್ನ ಸಹೋದರರು ಸೇರಿ ಎಂ.ವಿ.ಸಿ. 991/2017 ರಲ್ಲಿ ನನ್ನ ತಾಯಿ ಮೃತ ಪಟ್ಟಿರುವ ಬಗ್ಗೆ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ನನ್ನ ತಂದೆ ಮದ್ಯಪಾನ ಮಾಡಿ ತೂರಾಡಿ ಬಂದು ಕ್ರೇನ್ ಗೆ ಬಿದ್ದು ಅಪಘಾತ ಪಡಿಸಿಕೊಂಡರು ಎನ್ನುವುದು ಸುಳ್ಳು. ಕ್ರೇನ್ ಚಾಲಕನಿಗೆ ಪರವಾನಿಗೆ ಇಲ್ಲದಿರುವುದರಿಂದ ಪರಹಾರ ಕೊಡಲು ವಿಮಾ ಕಂಪನಿಯು ಬಾಧ್ಯಸ್ಥರಲ್ಲ ಎನ್ನುವುದು ಸುಳ್ಳು. ಚಾಲನಾ ಪರವಾನಿಗೆ ಹಾಜರು ಪಡಿಸಲು ತೊಂದರೆ ಇಲ್ಲ.

ಮರುವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ